http://www.howtoexam.com

**MK (P) 01**

# ಪ್ರಥಮ ಎಂ.ಎ. ಪರೀಕ್ಷೆ, ಜೂನ್ 2010
## (ಸಿಮ್ ಸ್ಕೀಂ)
## ಕನ್ನಡ
## ಕೋರ್ಸ್ - I : ಆಧುನಿಕ ಕನ್ನಡ ಸಾಹಿತ್ಯ : ಒಂದು ಪ್ರಕಾರ : ಕಾವ್ಯ

ಕಾಲ : 3 ಗಂಟೆಗಳು　　　　ಗರಿಷ್ಠಾಂಕ : 90

***ಸೂಚನೆಗಳು :*** *1) **ಹತ್ತನೆಯ** ಪ್ರಶ್ನೆಯನ್ನು ಬಿಡದೆ ಒಟ್ಟು **ಆರು** ಪ್ರಶ್ನೆಗಳಿಗೆ ಉತ್ತರಿಸಿ.* **(15×6=90)**

*2) **ಎಲ್ಲಾ** ಪ್ರಶ್ನೆಗಳಿಗೂ **ಸಮಾನ** ಅಂಕಗಳು.*

1. ಕನ್ನಡ ನವೋದಯ ಕಾವ್ಯದ ವೈಶಿಷ್ಟ್ಯಗಳನ್ನು ವಿವೇಚಿಸಿ.

2. ಕುವೆಂಪುರವರ 'ಪಕ್ಷಿಕಾಶಿ' ಸಂಕಲನದ ಕವನಗಳ ವೈವಿಧ್ಯತೆಗಳನ್ನು ಚರ್ಚಿಸಿ.

3. ಬೇಂದ್ರೆಯವರ 'ನಾದಲೀಲೆ' ಕವನ ಸಂಕಲನದಲ್ಲಿರುವ ಆಧ್ಯಾತ್ಮಿಕ ಗೀತೆಗಳ ತಾತ್ವಿಕ ನೆಲೆಗಳನ್ನು ಪರಾಮರ್ಶಿಸಿ.

4. ಕೆ. ಎಸ್. ನ. ರವರ 'ತೆರೆದ ಬಾಗಿಲು' 'ಭೂತ ಕನ್ನಡಿ' 'ಸಾಕುಮಗ' ಕವಿತೆಗಳನ್ನು ವಿಶ್ಲೇಷಿಸಿ.

5. ಅಡಿಗರ ಕವನಗಳಲ್ಲಿ ವ್ಯಕ್ತಗೊಂಡಿರುವ ಮನುಷ್ಯತ್ವದ ಹುಡುಕಾಟದ ಸ್ವರೂಪವನ್ನು ಚರ್ಚಿಸಿ.

6. ಸಿದ್ಧಲಿಂಗಯ್ಯನವರ ಕವನ ಸಂಕಲನದಲ್ಲಿನ 'ಸಾವಿರಾರು ನದಿಗಳು' 'ಕತ್ತೆ ಮತ್ತು ಧರ್ಮ', 'ಈ ದೇಶದ ಸೆರೆಮನೆ', 'ಕರಾಳರಾಣಿಯ ಕಥೆ' – ಕವಿತೆಗಳಲ್ಲಿ ಮೂರನ್ನು ಕುರಿತು ಚರ್ಚಿಸಿ.

7. ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕವನ ಸಂಕಲನದಲ್ಲಿ ವ್ಯಕ್ತಗೊಂಡಿರುವ ವರ್ಣ, ವರ್ಗ ಸಂಘರ್ಷದ ಸ್ವರೂಪವನ್ನು ಚರ್ಚಿಸಿ.

8. ಆಧುನಿಕ ಕನ್ನಡದಲ್ಲಿ ಸ್ತ್ರೀವಾದದ ನೆಲೆಗಳನ್ನು 'ನೀರು ಲೋಹದ ಚಿಂತೆ' ಕವನ ಸಂಕಲನದ ಹಿನ್ನೆಲೆಯಲ್ಲಿ ಚರ್ಚಿಸಿ.

9. ವಿಜಯಾದಬ್ಬೆಯವರ 'ಪತಿದೇವರಿಗೊಂದು ಬಹಿರಂಗ ಪತ್ರ', ಆರಿ ತೋರಿಸುವ ಸತ್ಯಗಳು, ಮಿರುಗುವ ಗೋರಿಗಳು – ಈ ಕವನಗಳನ್ನು ವಿಶ್ಲೇಷಿಸಿ.

**P.T.O.**

Career suggestion, Job opening college university and school information

http://www.howtoexam.com



10. ಅ) ಯಾವುದಾದರೂ **ಒಂದರ** ಭಾವ ಸ್ವಾರಸ್ಯವನ್ನು ನಿರೂಪಿಸಿ.

೧) ತೆರೆತೆರೆಯಾಗಿಹ ನೊರೆನೆರೆ ಕಡಲೆನೆ ನೋಡುವ ಕಣ್ನೋಡುವವರೆಗೆ ಬನಸಿರಿ ತುಂಬಿದ ಕಗ್ಗಿವೆಯ ಹಂಬಿರೆ ಧೂಳೀಸಮಹಿಮ ಬಾನ್ ಕರೆಗೆ ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿವನ ತಾನುರಿದುರಿದೇಳೆ ಮರಗಿಡದಲಿ ಜಡದೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ.

೨) ಅತ್ತಾರೆ ಅತ್ತುಬಿಡು, ಹೊನಲು ಬರಲಿ ನಕ್ಕ್ಯಾಕ

ಮರಸತೀ ದುಕ್ಕ ?

ಎಲೆಬಡಸಿ, ಕೆಡವು, ಬರಿಗಣ್ಣು ಭ್ಯಾಡ, ತುಟಿಕಚ್ಚಿ

ಹಿಡಿಯದಿರು ಬಿಕ್ಕ.

ಆ) ಯಾವುದಾದರೂ **ಎರಡರ** ಸಂದರ್ಭ ಸ್ವಾರಸ್ಯ ತಿಳಿಸಿ.

೧) ಉದಯದೊಳೇನ್ ? ಹೃದಯವ ಕಾಣ್

೨) ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ

೩) ಕೂರುವುದು ಕಷ್ಟವಾಗಿತ್ತ ಬಸರಿಗೆ, ಜತೆಗೆ ತಾಯಿ ನೆನಪೂ ಬಂತು

೪) ನೆನ್ನೆದಿನ ನನ್ನಜನ ಬೆಟ್ಟದಂತೆ ಬಂದರು.

---

Career suggestion, Job opening college university and school information